ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 34/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಯು. ತಾರಾನಾಥ | ಫ್ರಾಸಾಃ 17 |
| ಗಂಡನ ಹೆಸರು | : | ದಿ. ಶ್ರೀನಿವಾಸ ಯಾದವ | ಚಾಸಾಃ 26 |
| ಪ್ರಾಯ | : | 57 ವರ್ಷ | **ದಿನಾಂಕಃ 12.04.2022** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಉಳ್ಳಾಲ, ಮಂಗಳೂರು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

2008 ರಲ್ಲಿ ಪೊಲೀಸರು ನನ್ನನ್ನು ಅಬ್ಬಕ್ಕ ಸರ್ಕಲ್ ದಿಂದ ಉಳ್ಳಾಲ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು. ಪೊಲೀಸರು ಠಾಣೆಯಿಂದ ನನ್ನನ್ನು, ಪ್ರಭಾಕರನನ್ನು ಮತ್ತು ಒಬ್ಬ ಆರೋಪಿಯನ್ನು ಬೋಳಾರದಲ್ಲಿರುವ ಲೀವೆಲ್ ಎಂಬ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ನಂತರ ಪೊಲೀಸರು ನಮ್ಮನ್ನು ಒಂದು ಫ್ಲಾಟಿಗೆ ಕರೆದುಕೊಂಡು ಹೋಗಿದ್ದರು. ಆ ಫ್ಲಾಟಿಗೆ ಬೀಗ ಹಾಕಿತ್ತು. ಆ ಬೀಗವನ್ನು ಪೊಲೀಸರು ಒಡೆದಿದ್ದಾರೆ. ಆ ಫ್ಲ್ಯಾಟ್ ನ್ನು ಪೊಲೀಸರು ಶೋಧನೆ ಮಾಡಿದ್ದಾರೆ.

2. ಆ ಫ್ಲ್ಯಾಟ್ ದಲ್ಲಿ ಅನೇಕ ಸಾಮಾನುಗಳು ಇದ್ದವು. ಐ.ಡಿ. ಕಾರ್ಡ್ ಗಳು, ಲೈಸೆನ್ಸ್ 6 ಟೈಮರ್ ಗಳು, ಲರ್ನಿಂಗ್ ಲೈಸೆನ್ಸ್ ಮುಂತಾದ ವಸ್ತುಗಳು ಆ ಫ್ಲ್ಯಾಟಿನಲ್ಲಿ ಇದ್ದವು. ಪೊಲೀಸರು ಆ ಎಲ್ಲಾ ವಸ್ತುಗಳನ್ನು ತಮ್ಮ ವಶಕ್ಕೆಪಡೆದಿದ್ದಾರೆ. ಆಗ ಪೊಲೀಸರು ಬರವಣಿಗೆ ಮಾಡಿದ್ದಾರೆ. ಆ ಬರವಣಿಗೆ ಮಾಡಿದ ದಾಖಲೆಯಲ್ಲಿ ಪೊಲೀಸರು ನನ್ನ ಸಹಿಯನ್ನು ಪಡೆದಿದ್ದಾರೆ. ಸಾಕ್ಷಿ ತನ್ನ ಸಹಿ ಇರುವ ಮಹಜರು

ಗುರುತಿಸಿದ್ದು, ಅದನ್ನು ನಿಶಾನೆ ಪಿ-29 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಸಾಕ್ಷಿ 6 ಟೈಮರ್ ಗಳನ್ನು ಗುರುತಿಸಿದ್ದು, ಅವುಗಳನ್ನು ಮುಮಾ-91 ಎಂದು ಗುರುತಿಸಲಾಯಿತು.

(ಸಾಕ್ಷಿಗೆ ತೋರಿಸಬೇಕಾದಂತಹ ಮಹಜರ್ ದಲ್ಲಿರುವ ಮುದ್ದೆಮಾಲುಗಳು ಸಿಗದೇ ಇರುವುದರಿಂದ ಸಾಕ್ಷಿಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

ಸಾಕ್ಷಿಯನ್ನು ದಿನಾಂಕ **13.12.2022** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದಃ

3. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುಮಾ-131 ರಿಂದ ಮುಮಾ-143 ನ್ನು ಗುರುತಿಸಿದ್ದಾರೆ. ಸಾಕ್ಷಿ ನಿಶಾನೆ ಪಿ-30 ರಿಂದ ನಿಶಾನೆ ಪಿ-35 ರಲ್ಲಿರುವ ದಾಖಲೆಗಳನ್ನು ಗುರುತಿಸಿದ್ದಾರೆ.

ಪಾಟೀ ಸವಾಲುಃ 10 ನೇ ಆರೋಪಿ ಪರ ವಕೀಲರಿಂದಃ

4. ಪೊಲೀಸರು ನನಗೆ ಪಂಚನಾಗಿ ಬರಲು ನೋಟೀಸ್ ನೀಡಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ. ನಾನು ಸಾಕ್ಷಿದಾರನಾಗಿ ಯಾವುದೇ

ಆರೋಪಿತರ ಮನೆಗೆ ಹೋಗಿಲ್ಲ ಅಂದರೆ ಸರಿಯಲ್ಲ. ನಾನು ಖಾಲಿ ಪೇಪರ್ ಮೇಲೆ ಸಹಿ ಹಾಕಿದ್ದೇನೆ ಅಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ನಿಶಾನೆ ಪಿ-29 ರಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮ್ಮುಖದಲ್ಲಿ ಯಾವುದೇ ದಾಖಲೆಗಳನ್ನು ಮತ್ತು ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ಪೊಲೀಸರ ಹೇಳಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.